ಫೋನ್. 8402

<u>ನಂ. ಎಲ್ ಆರ್ ಎಫ್ 65:80-81.</u>

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಹಾಸನ ಜಿಲ್ಲಾ,
ಹಾಸನ-573201, ತಾ. 14-7-80.

## ಸುತ್ತೋಲೆ

ವಿಷಯ:- ಭೂಸುಧಾರಣೆ — ಭೂಸುಧಾರಣಾ ಕಾಯಿದೆ 48(ಎ) ರ ಮೇರೆ ಬಂದ ಗೇಣಿ ಅರ್ಜಿಗಳನ್ನು ಭೂಸುಧಾರಣಾ ಕಾಯಿದೆಯ ಅಧಿನಿಯಮ 19 ರ ಮೇರೆ ಗೇಣಿ ಅರ್ಜಿಗಳನ್ನು ಪರಿಶೀಲನೆ ಮಾಡಿ ಅರ್ಜಿಗಳ ಮೇಲೆ ಗೇಣಿ ಮಾಹಿತಿ ನಮೂದಿಸಿ ಭೂ ನ್ಯಾಯ ಮಂಡಳಿಯ ಮುಂದೆ ಇಡುವ ಬಗ್ಗೆ.

---

ಕರ್ನಾಟಕ ರಾಜ್ಯ ಸರ್ಕಾರದಿಂದ ಸಾದರಾದ ಸುತ್ತೋಲೆಯ ಕ್ರಮಸಂಖ್ಯೆ ಆರ್ ಡಿ 167 ಎಲ್ ಆರ್ ಎಂ 80 ದಿನಾಂಕ 11-6-80 ರ ಪತ್ರಕ್ಕೆ ನಿಮ್ಮಗಳ ಗಮನ ಸೆಳೆಯಬಯಸುತ್ತೇನೆ.

ಮೇಲ್ಕಂಡ ಸುತ್ತೋಲೆಯಲ್ಲಿ ನಮೂದಿಸಿರುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಅದರಂತೆ ಗೇಣಿ ಅರ್ಜಿಗಳನ್ನು ಭೂ ನ್ಯಾಯ ಮಂಡಳಿಗಳಲ್ಲಿ ಮಂಡಿಸುವುದಕ್ಕೆ ಪೂರ್ವಭಾವಿಯಾಗಿ ಪರಿಶೀಲನೆ ಮಾಡಿ ಗೇಣಿಯ ಮಾಹಿತಿಗಳನ್ನು ಅರ್ಜಿಗಳ ಮೇಲೆ ನಮೂದಿಸಿ ಕಡತಗಳನ್ನು ಭೂ ನ್ಯಾಯ ಮಂಡಳಿಯ ಮುಂದೆ ಇಡಲು, ಈ ಕಾರ್ಯಾಲಯದ ಕ್ರಮಸಂಖ್ಯೆ ಎಲ್ ಆರ್ ಎಫ್ 65:80 ದಿನಾಂಕ 23-6-80 ರಲ್ಲಿ ಜಿಲ್ಲೆಯ ಎಲ್ಲಾ ತಹಸೀಲ್ದಾರ್ :ವಿಶೇಷ ತಹಸೀಲ್ದಾರರವರಿಗೆ ಅಲಾಯಿದ ಸೂಚನೆಯನ್ನು ಸಹ ಕೊಟ್ಟಿರುತ್ತದೆ.

ಭೂ ನ್ಯಾಯ ಮಂಡಳಿಗಳಲ್ಲಿ ತಿರಸ್ಕರಿಸಲ್ಪಟ್ಟ ಕಡತಗಳನ್ನು ಪರಿಶೀಲಿಸಲಾಗಿ, ರಾಜ್ಯ ಸರ್ಕಾರದವರು ಸೂಚಿಸಿರುವ ಆದೇಶವನ್ನು ಮತ್ತು ಆಗಿಂದಾಗ್ಗೆ ಕಳುಹಿಸುತ್ತಿರುವ ಸಲಹೆಗಳನ್ನು ಕಡೆಗಣಿಸಿರುವುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಇನ್ನುಮುಂದೆ ಈ ನಿರ್ಲಕ್ಷ್ಯತೆಗಳಿಗೆ ಅವಕಾಶಕೊಡದೆ ಹಾಲಿ ಭೂನ್ಯಾಯ ಮಂಡಳಿಯ ಮುಂದೆ ಉಳಿದಿರುವ ಎಲ್ಲಾ ಅರ್ಜಿಗಳನ್ನು ಮೇಲ್ಕಂಡ ಸುತ್ತೋಲೆಯಲ್ಲಿ ಆದೇಶಿಸಿರುವಂತೆ ಭೂಸುಧಾರಣಾ ಕಾಯಿದೆಯ ಸೆಕ್ಷನ್ 48(ಎ) ಮೇರೆ ಸಲ್ಲಿಸಿದ ಗೇಣಿ ಅರ್ಜಿಗಳನ್ನು ಭೂಸುಧಾರಣಾ ನಿಯಮಾವಳಿಯ ನಿಯಮ 19 ರ ಮೇರೆ ಅರ್ಜಿಗಳನ್ನು ರೆವಿನ್ಯೂ ದಾಖಲಾತಿಗಳಾದ, ರೆಕಾರ್ಡ್ಸ್ ಆಫ್ ರೈಟ್ಸ್, ಪಹಣಿಯ ರಿಜಿಸ್ಟರುಗಳನ್ನು ಮೊಕಾಬಿಲೆ ಮಾಡಿ, ಸದರಿ ಕಡತದಲ್ಲಿ ಪಹಣಿಯ ನಕಲು (ಫಾರಂ ನಂಬರು 16) ರಲ್ಲಿ ಹಾಕಿ ಅಳವಡಿಸತಕ್ಕದ್ದು. ಮತ್ತು ರಾಜ್ಯ ಸರ್ಕಾರದಿಂದ ಪತ್ರದ ನಂ. ಆರ್ ಡಿ 36 ಎಲ್ ಆರ್ ಎ 79 ದಿನಾಂಕ 27-2-79 ರ ಪತ್ರದಲ್ಲಿ ಸೂಚಿಸಿರುವ ತಪಾಸಣೆ ಪಟ್ಟಿಯನ್ನು ಕ್ರಮವಾಗಿ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಿ ಅಳವಡಿಸತಕ್ಕದ್ದು ಮತ್ತು ಫಾರಂ ನಂಬರು8 ಮತ್ತು 9ನೇ ನೋಟೀಸುಗಳನ್ನು ಕಾನೂನು ರೀತ್ಯ ಜಾರಿ ಮಾಡತಕ್ಕದ್ದು.

ಎರಡನೇಯದಾಗಿ ಭೂಸುಧಾರಣೆ ಕಾಯಿದೆ 1961 ರ ಮೇರೆ ಭೂಸುಧಾರಣಾ ತಿದ್ದುಪಡಿ ಕಾಯಿದೆ ಜಾರಿಗೆ ಬಂತ ತರುವಾಯ ಅಧಿನಿಯಮ 44(1) ರ ಮೇರೆ ಗೇಣಿದಾರರ ಸ್ವಾಧೀನದಲ್ಲಿರುವ ಜಮೀನು, ಸರ್ಕಾರಕ್ಕೆ ಸೇರಿದ್ದಾಗಿರುತ್ತದೆ. ಮೇಲ್ಕಂಡ ಅರ್ಜಿಗಳನ್ನು ಭೂನ್ಯಾಯ ಮಂಡಳಿಯ ಮುಂದೆ ಇಡುವುದಕ್ಕೆ ಪೂರ್ವಭಾವಿಯಾಗಿ, ಅಧಿನಿಯಮ 44(1) ರ ಮೇರೆ ಗೇಣಿಗೆ ಒಳಪಟ್ಟಿದೆಯೇ ಅಥವಾ ಇಲ್ಲವೇ ಎಂಬುದನ್ನು ತನಿಖೆ ಮಾಡಿ ಗೇಣಿಯ ಬಗ್ಗೆ ಖಚಿತವಾದ ಅಭಿಪ್ರಾಯವನ್ನು ಕಡತದಲ್ಲಿ ನಮೂದಿಸಿ ಭೂನ್ಯಾಯ ಮಂಡಳಿಯ ಮುಂದೆ ಇಡತಕ್ಕದ್ದು.

ಈ ಮೇಲ್ಕಂಡ ಲೋಪದೋಷಗಳಿಗೆ ಇನ್ನುಮುಂದೆ ಅವಕಾಶಕೊಡಕೂಡದು. ಜಿಲ್ಲಾಧಿಕಾರಿ:ವಿಶೇಷ ಜಿಲ್ಲಾಧಿಕಾರಿಯವರು ನಿಮ್ಮ ತಾಲ್ಲೂಕಿನ ಭೂಸುಧಾರಣಾ ಶಾಖೆಯನ್ನು ತಪಾಸಣೆ ಮಾಡುವಾಗ್ಗೆ ಇಂತಹ ಲೋಪದೋಷಗಳು ಕಂಡಲ್ಲಿ ಸಂಬಂಧಪಟ್ಟ ಶಿರಸ್ತೇದಾರರುಗಳ ವಿರುದ್ಧ ಕಾನೂನು ರೀತ್ಯ ಉಗ್ರ ಕ್ರಮ ಕೈಗೊಳ್ಳಲಾಗುತ್ತೆ. ತಿಳಿಯುವುದು.

ಸಹಿ,
ವಿಶೇಷ ಜಿಲ್ಲಾಧಿಕಾರಿ
ಹಾಸನ ಜಿಲ್ಲಾ

ನಕಲನ್ನು ಜಿಲ್ಲೆಯ ಎಲ್ಲಾ ತಹಸೀಲ್ದಾರ್:ವಿಶೇಷ ತಹಸೀಲ್ದಾರರವರಿಗೆ ರವಾನಿಸಿದೆ.
ಜಿಲ್ಲೆಯ ಹಾಸನ:ಸಕಲೇಶಪುರದ ಉಪವಿಭಾಗಾಧಿಕಾರಿಗಳಿಗೆ ರವಾನಿಸಿದೆ.